ಕಥೆ

# ನೆರಳು

ಪದ್ಮಿನಿ ನಾಗರಾಜು
ಕಲೆ: ಈಶ್ವರ ಬಡಿಗೇರ



ಅಂದು ಬೆಳ್ಳಂಬೆಳಗ್ಗೆಯೇ ಇಡೀ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು. ಮಿಸ್ಟರ್ ಹೆನ್ರಿ ಸತ್ತ ಸುದ್ದಿ ವ್ಯಾಲಿ ರೆಸಾರ್ಟ್ ಅನ್ನು ದಾಟಿ ಪೆರುಮಾಳ್ ಮಲ್ಯೆ ಹಳ್ಳಿಗೂ ತಲುಪಿತ್ತು. ಪ್ರತಿನಿತ್ಯದಂತೆ ವಾಕಿಂಗ್‌ಗೆ ಹೋದಾಗ ಹಾವು ಕಚ್ಚಿ ಹೆನ್ರಿ ಸತ್ತ ಸುದ್ದಿ ಹಬ್ಬುತ್ತಿದಂತೆ ಅದೆಲ್ಲಿಂದಲೋ ಜನ ಮಾಡುವ ಕೆಲಸಗಳನ್ನು ಬಿಟ್ಟು ಓಡೋಡಿ ಬಂದರು. ಮ್ಯಾನೇಜರ್ ತನ್ನ ಮೊಬೈಲ್‌ನಿಂದ ಕೊಡೈಕೆನಾಲ್ ಆಸ್ಪತ್ರೆಗೆ ಕನೆಕ್ಟ್ ಮಾಡಲು ಒದ್ದಾಡುತ್ತಿದ್ದ. ಅಷ್ಟರಲ್ಲಿ ಶಿವ ರೆಸ್ಟಾರ್ಟ್‌ನ ಕೂಲಿ ಆಳು ಒಂದಿಬ್ಬರನ್ನು ಕರೆದುಕೊಂಡು ಕೊಳದ ಬಳಿ ಹಾವು ಕಚ್ಚಿ ಬಾಯಲ್ಲಿ ನೊರೆ ಬರುತ್ತಿದ್ದ ಹೆನ್ರಿಯನ್ನು ಹೊತ್ತುಕೊಂಡು ಬಂದು ರಿಸೆಪ್ಷನ್ ಕೌಂಟರ್ ಬಳಿ ಮಲಗಿಸಿದ. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವನನ್ನು ಮುಟ್ಟಿದ ಹಿರಿಯನೊಬ್ಬ ಸತ್ತಿದ್ದಾನೆ ಎಂಬಂತೆ ತಲೆಯಲ್ಲಾಡಿಸಿದ. ಆದರೆ ಅದನ್ನು ನಂಬುವ ಸ್ಥಿತಿಯಲ್ಲಿ ಅವರು ಇರಲಿಲ್ಲ. ಬೈಕ್ ತರಲು ಶಿವ ಕೂಗಿ ಹೇಳಿದ. ತಂದ ಬೈಕ್ ಮೇಲೆ ಹೆನ್ರಿಯನ್ನು ಹಾಕಿಕೊಂಡ ಶಿವ, ಮ್ಯಾನೇಜರ್‌ನನ್ನು ಹಿಂದೆ ಕೂರುವಂತೆ ಕೂಗಿ ಹೇಳಿ ಬೈಕ್ ಒದ್ದು ಕೊಡೈಕೆನಾಲ್‌ಗೆ ಹೊರಟೇಬಿಟ್ಟ.

ಕೋಟ್ಯಂತರ ರೂಪಾಯಿ ಆಸ್ತಿ, ಆಡಿ, ಥಾರ್, ಫೆರಾರಿ ಅಂತ ಹದಿನೈದು ಗಾಡಿಗಳಿದ್ದರೂ ಹೆನ್ರಿಯನ್ನು ಬೈಕ್‌ನಲ್ಲಿ ಕರೆದೊಯ್ದುದು ಅಲ್ಲಿದ್ದ ಪರಮಸಿವನ್‌ಗೆ ಸರಿ ಅನ್ನಿಸದಿದ್ದರೂ, ನಾ ಮುಟ್ಟಿ ನೋಡಿ 'ಹೆನ್ರಿ ಸಾಹೇಬ್ರು ಇಲ್ಲ' ಅಂದರೂ ಸಿವ ಕರಕೊಂಡು ಹೋದ ಎಂದು ಕೈಯಾಡಿಸಿದ ಮುದುಕನನ್ನು ನುಂಗುವಂತೆ ನೋಡಿದ ಅಲ್ಲಿನವರು 'ಸಾಹೇಬ್ರು ನಮಗೆಲ್ಲಾ ಮಾಡಿದ ಉಪಕಾರಕ್ಕೆ ಬದುಕಿ ಬಂದರೆ ಸಾಕು' ಎಂದು ದೈವವನ್ನು ಕೈಮುಗಿದು ಬೇಡಿಕೊಂಡರು. ಮುದುಕ ಮಾತ್ರ ಅದೆಲ್ಲಾ ಸಾಧ್ಯವಿಲ್ಲ ಎಂಬಂತೆ ದೂರದಲ್ಲಿದ್ದ ಮಾವಿನಮರದ ಬುಡದಲ್ಲಿ ಕುಳಿತು ಬೀಡಿ ಹಚ್ಚಿದ.

ಕೆಲವೇ ನಿಮಿಷಗಳಲ್ಲಿ ಹೆನ್ರಿ ಸಾಹೇಬ್ರು ಸತ್ತ ಸುದ್ದಿ ವ್ಯಾಲಿ ರೆಸಾರ್ಟ್, ಕೊಡೈಕೆನಾಲ್ ದಾಟಿ ಲಂಡನ್ನಿಗೂ ತಲುಪಿತು. ನಾನಾ ಭಾಗಗಳ ಚಾನಲ್‌ನವರು ಬೆಲ್ಲಕ್ಕೆ ಮುತ್ತುವ ಇರುವೆಗಳಂತೆ ಬಂದು ಸೇರಿದರು. ಅಷ್ಟರಲ್ಲಿ ಪೋಲಿಸರು ಬಂದು ಹೆನ್ರಿ ಸಾಹೇಬರು ಹಾವು ಕಚ್ಚಿ ಬಿದ್ದ ಸ್ಥಳವನ್ನು ಟೇಪು ಕಟ್ಟಿ ಮಾರ್ಕ್ ಮಾಡಿದರು.

'ನಿನಗೆ ಯಾರ ಮೇಲಾದರೂ ಅನುಮಾನ ಇದೆಯಾ?' ಇಳವರಸಿಗೆ ಸಬ್‌ಇನ್‌ಸ್ಪೆಕ್ಟರ್ ಮುಜೀದ್ ಕೇಳಿದ.

'ಅನುಮಾನನಾ ? ಸಾಮಿ ಹಾವು ಕಚ್ಚಿರೋದು' ಎಂದು ಇಳವರಸಿ ಅಚ್ಚರಿಯಿಂದ ಕಣ್ಣುಬಿಟ್ಟಳು.

'ಹಾ, ಅದು ಗೊತ್ತು' ಎಂದು ಮುಜೀದ್ ಪೊಲೀಸ್ ತಲೆ ತನಿಖೆ ಪ್ರಾರಂಭಿಸಿತ್ತು.

ಅದೊಂದು ನಾನ್ನೂರು ಎಕರೆಯ ವಿಸ್ತಾರವಾದ